VIJAYAKUMAR KANNUR
Digitally signed by VIJAYAKUMAR KANNUR
Date: 2025.07.11 11:04:07 +0530



**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 10.07.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ 2 ರಿಂದ 5 ರವರ ಪರ ಶ್ರೀ ಹೆಚ್ ಎ ಕೆ ವಕೀಲರಿಂದ :**

ಮೃತ ದಸ್ತಗಿರಿಯಪ್ಪ ನನ್ನ ತಂದೆಯಾಗಿರುವನು. ಮೃತ ಯಂಕವ್ವ ನನ್ನ ತಾಯಿ. ನನ್ನ ತಂದೆ ಮೃತ ಪಟ್ಟು ಈಗ ಸುಮಾರು 10 ವರ್ಷಗಳು ಆಗಿರಬಹುದು. ನನ್ನ ತಾಯಿ ನನ್ನತಂದೆ ಮೃತ ಪಡುವ ಪೂರ್ವದಲ್ಲೇ ಮೃತ ಪಟ್ಟಿರುವರಳು. ಇವರಿಗೆ ನಾನು ಮತ್ತು ಪ್ರತಿವಾದಿ 1 ರಿಂದ 4 ರವರು ಮಕ್ಕಳು ಆಗಿರುವೆವು ಎಂದರೆ ಸರಿ .

2. ನನ್ನ ತಂದೆ ಮತ್ತು ಆತನ ಸಹೋದರ ಸಹೋದರಿಯರು ವಾಟ್ನಿ ಮಾಡಿಕೊಂಡ ನಂತರ ದಾವಾ ಆಸ್ತಿಯ ಸರ್ವೇ ನಂಬರ್ 9/2 ರ ಜಮೀನು ನನ್ನ ತಂದೆಯ ಪಾಲಿಗೆ ಬಂದಿರುವುದು ಎಂದರೆ ಸರಿ . ಸರ್ವೇ ನಂಬರ್ 75/2 ವಿಸ್ತೀರ್ಣ 4 ಎಕರೆ ಜಮೀನು ಮೂಲತಃ ರಂಗಪ್ಪ ಮಾದರ ಇವರ ಹೆಸರಿನಲ್ಲಿ ಇದ್ದು ವಾಟ್ನಿ ಮಾಡಿಕೊಂಡ ನಂತರ ಲಕ್ಷ್ಮವ್ವ , ಯಲ್ಲಪ್ಪ , ರುಕ್ಮವ್ವ ಮತ್ತು ಭೀಮಪ್ಪ ಇವರಿಗೆ ಪಾಲಿಗೆ ಬಂದಿರುವುದು ಎಂದರೆ ಸಾಕ್ಷಿಯು ತನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ನಾನು ಮತ್ತು ಉಳಿದ ಪ್ರತಿವಾದಿಯರು ಸರ್ವೇ ನಂಬರ್ 72/2 ಬ ಜಮೀನಿನಲ್ಲಿ ವಾಟ್ನಿ ಮಾಡಿಕೊಂಡಿದ್ದು ಆ ವಾಟ್ನಿಯ ಪ್ರಕಾರ ಪ್ರತಿವಾದಿ 2 ರವರಿಗೆ 1 ಎಕರೆ 7 ಗುಂಟೆ ಹಾಗೂ ಪ್ರತಿವಾದಿ 4 ರವರಿಗೆ 1 ಎಕರೆ 7 ಗುಂಟೆ ಜಮೀನನ್ನು ಬಿಟ್ಟುಕೊಟ್ಟಿದ್ದೇವೆ ಎಂದರೆ ಸರಿಯಲ್ಲ, ತಾನು ಯಾವುದೇ ಸಹಿ ಮಾಡಿರುವುದಿಲ್ಲ ಮತ್ತು ದಾಖಲೆ ಬರೆದುಕೊಟ್ಟಿರುವುದಿಲ್ಲ ಎಂದು ಉತ್ತರಿಸುವರು. ಸರ್ವೇ ನಂಬರ್ 65/37 ವಿಸ್ತೀರ್ಣ 4 ಎಕರೆ 27 ಗುಂಟೆಯ ಜಮೀನಿನಲ್ಲಿ ಪ್ರತಿವಾದಿ 2 ರವರಿಗೆ 12 ಎಕರೆ 14 ಗುಂಟೆ ಹಾಗೂ ಪ್ರತಿವಾದಿ 2 ರವರಿಗೆ ಸಹ 2 ಎಕರೆ 13 ಗುಂಟೆ ಜಮೀನನ್ನು ಬಿಟ್ಟುಕೊಟ್ಟಿದ್ದೇವೆ ಎಂದರೆ ಸರಿಯಲ್ಲ.

3. ಈ ಹಕ್ಕು ಬದಲಾವಣೆಯ ಆದೇಶದ ವಿರುದ್ದ ನಾನು ಯಾವುದೇ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ. ವಾಟ್ನಿ ನಿಜವಿರುವುದಿಲ್ಲ , ಏಕೆಂದರೆ ತಾನು ಸಹಿ ಮಾಡದೇ ಇರುವುದರಿಂದ. ವಾಟ್ನಿ ಪತ್ರದ ಮೇಲೆ ಯಾರು ಸಹಿ ಮಾಡಿರುವರು ಎಂದು ಸಹ ನನಗೆ ಗೊತ್ತಿರುವುದಿಲ್ಲ. ವಾಟ್ನಿ ಪತ್ರ ಖೊಟ್ಟಿ ಇರುವುದು ಎಂದು ಹೇಳಿ ಯಾವುದೇ ಪೊಲೀಸ್ ಠಾಣೆಯಲ್ಲಿ ದೂರು ದಾಖಲು ಮಾಡಿರುವುದಿಲ್ಲ. ಸರ್ವೇ ನಂಬರ್ 9/2 ರ ಜಮೀನು ಪೂರ್ವಜರ ಆಸ್ತಿ ಎಂದು ತೋರಿಸುವ ಸಲುವಾಗಿ ಯಾವುದೇ ದಾಖಲೆಗಳನ್ನು ನಾನು ಹಾಜರು ಪಡಿಸಿರುವುದಿಲ್ಲ. ಉಳಿದ ದಾವಾ ಆಸ್ತಿಗಳು ಸಹ ಹಿರಿಯರ ಆಸ್ತಿಗಳು ಎಂದು ತೋರಿಸುವ ಸಲುವಾಗಿ ದಾಖಲೆಗಳನ್ನು ಹಾಜರು ಪಡಿಸಿರುವೆನು. ಸರ್ವೇ ನಂಬರ್ 75/6 ಮತ್ತು 75/2 ಬ ಈ ಆಸ್ತಿಗಳು ಸರಕಾರದವರು ನಮ್ಮ ತಂದೆಗೆ ಮಂಜೂರು ಮಾಡಿರುವರು ಎಂದರೆ ಸಾಕ್ಷಿ ನನ್ನ ತಂದೆ ಹಿಡಿದಿರುವುದಾಗಿ ಉತ್ತರಿಸುವರು . ಸರ್ವೇ ನಂಬರ್ 65/37 ಮತ್ತು 65/115 ರ ಆಸ್ತಿಗಳು ನನ್ನ ತಂದೆ ಖರಿದಿ ಮಾಡಿರುವರು ಆಸ್ತಿಗಳು ಎಂದರೆ ಸರಿ .

4. ಪ್ರತಿವಾದಿ 2 ಮತ್ತು 4 ರವರು ಸರ್ವೇ ನಂಬರ್ 9/2 ರ ಜಮೀನಿನಲ್ಲಿ ದಿಃ 04.01.2023 ರಂದು ನೊಂದಾಯಿತ ವಾಟ್ನಿ ಮಾಡಿಕೊಂಡ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಈ ವಾಟ್ನಿಯ ಪ್ರಕಾರ ಸರ್ವೇ ನಂಬರ್ 9/2 ರ ಜಮೀನು ಸಂಪೂರ್ಣವಾಗಿ ಪ್ರತಿವಾದಿ 2 ರವರ ಪಾಲಿಗೆ ಬಂದಿರುವುದು ಎಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸುವರು. ದಿಃ 18.01.2023 ರಂದು ಪ್ರತಿವಾದಿ 2 ರವರು ಈ ಜಮೀನನ್ನು ಅರ್ಜುನ್ ಎಂಬುವವರಿಗೆ ಬಕ್ಷಿಸ್ ಬರೆದುಕೊಟ್ಟಿರುವರು ಎಂದರೆ ಸಾಕ್ಷಿಯು ತನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಬಕ್ಷಿಸ್ ಮತ್ತು ವಾಟ್ನಿ ಪತ್ರ ಖೊಟ್ಟಿ ಮಾಡಿರುವುದಾಗಿ ಎಂದು ನಾನು ವಾದ ಪತ್ರದಲ್ಲಿ ಬರೆಸಿರುವುದಿಲ್ಲ. ಸರ್ವೇ ನಂಬರ್ 9/2 ರ ಜಮೀನಿಗೆ ಈಗ ಅರ್ಜನ ಹೆಸರು ದಾಖಲೆ ಇರುವುದು ಎಂದರೆ ಸಾಕ್ಷಿ ನೋಡಿರುವುದಿಲ್ಲ ಎಂದು ಉತ್ತರಿಸುವರು. ಈ ಜಮೀನು ಈಗ ಅರ್ಜುನ ಕಬ್ಜೆ ಇರುವನು ಎಂದರೆ ಆತನಿಗೆ ಬಿಟ್ಟುಕೊಟ್ಟಿರುವುದಾಗಿ ಎಂದು ಸಾಕ್ಷಿ ಉತ್ತರಿಸುವರು.

5. ಸರ್ವೇ ನಂಬರ್ 75/2 ಬಿ ಜಮೀನು ಈಗ ಪ್ರತಿವಾದಿ 2 ರವರು ಕಬ್ಜೆ ಇರುವರು ಎಂದರೆ ಸರಿ . ಸರ್ವೇ ನಂಬರ್ 75/6 ವಿಸ್ತೀರ್ಣ 1 ಎಕರೆ 7 ಗುಂಟೆ ಜಮೀನು ಗಿರಿಯಪ್ಪ ಪ್ರತಿವಾದಿ 4 ರವರು ಸಾಗುವಳಿ ಮಾಡುತ್ತಿರುವರು ಎಂದರೆ ಸರಿ . ಸರ್ವೇ ನಂಬರ್ 65/37 ರ ಜಮೀನು ಪ್ರತಿವಾದಿ 2 ರವರು ಸಾಗುವಳಿ ಮಾಡಿ ಕಬ್ಜೆ ಹೊಂದಿರುವರು ಎಂದರೆ ಸರಿ . ಸರ್ವೇ ನಂಬರ್ 65/115 ರ ವಿಸ್ತೀರ್ಣ 2 ಎಕರೆ 13 ಗುಂಟೆ ಪ್ರತಿವಾದಿ 4 ರವರು ಕಬ್ಜೆಯನ್ನು ಹೊಂದಿರುವರು ಎಂದರೆ ಸರಿ .

6.ನನ್ನ ವಿವಾಹವಾಗಿ ಈಗ ಸುಮಾರು 30 ವರ್ಷಗಳು ಆಗಿರುವವು. ನನ್ನ ತಂದೆಯ ಜೀವಿತಾವಧಿಯಲ್ಲಿ ವಿವಾಹ ಆಗಿರುವುದು. ನನ್ನ ತಂದೆ ವಿವಾಹದ ಸಮಯದಲ್ಲಿ ನನಗೆ ನೀಡಬೇಕಾಗಿರುವುದನ್ನು ನೀಡಿ ಒಳ್ಳೆ ಮನತೆನದ ಸಂಬಂಧದ ಜೊತೆ ವಿವಾಹ ಮಾಡಿ ಕೊಟ್ಟಿರುವನು ಎಂದರೆ ತಮ್ಮ ವಿವಾಹದ ಸಮಯದಲ್ಲಿ ಏನು ನೀಡಿರುವುದಿಲ್ಲ ಎಂದ ಸಾಕ್ಷಿ ಉತ್ತರಿಸುವರು. ನಾನು ಖಾಯಂ ಆಗಿ ಅಂಕಲಿ ಗ್ರಾಮದಲ್ಲಿ ವಾಸವಾಗಿರುವೆನು. ದಾವಾ ಆಸ್ತಿಗಳಲ್ಲಿ ನನಗೆ ಪಾಲು ಇರುವುದಾಗಿ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ನಮ್ಮ ಕುಟುಂಬದ ಹಿರಿಯರ ಆಸ್ತಿಗಳು ಆಗಿರುವುದಿಲ್ಲ, ಈ ಆಸ್ತಿಗಳಲ್ಲಿ ನನಗೆ ಪಾಲು ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ತೊಂದರೆ ನೀಡುವ ಸಲುವಾಗಿ ನಾನು ಈ ಖೊಟ್ಟಿ ದಾವೆ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ಪಾಲು ನೀಡುವಂತೆ ಕೇಳಿರುವುದಿಲ್ಲ ಎಂದರೆ ಸರಿಯಲ್ಲ, ಕೇಳಿದಾಗ ಅವರು ಇಂದು ಅಥವಾ ನಾಳೆ ಅಂತ ಮುಂದೂಡುತ್ತಾ ಬಂದಿರುವರು. ನನ್ನ ವಿವಾಹವಾದಾಗಿನಿಂದಲೂ ಪಾಲು ನೀಡುವಂತೆ ಕೇಳುತ್ತಾ ಇರುವೆನು. ಈ ಪ್ರತಿವಾದಿಯರಿಗೆ ವಿನಾಃ ಕಾರಣ ತೊಂದರೆ ನೀಡುವ ಸಲುವಾಗಿ ಈ ಸುಳ್ಳು ದಾವೆ ದಾಖಲು ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ

VIJAYAKUMAR KANNUR
Digitally signed by VIJAYAKUMAR KANNUR
Date: 2025.07.11 11:04:15 +0530